**ಸಾಕ್ಷಿಗೆ ದಿನಾಂಕ 20.01.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀಮತಿ. ಪಂಕಜ ಬಿ ಸಿ ವಕೀಲರಿಂದಃ**

1. ಅಪಘಾತವು ದಿ.16.11.2022 ರಂದು ಸಾಯಿ ಗಾರ್ಮೆಂಟ್, ಚಿಕ್ಕಗೊಲ್ಲರಹಟ್ಟಿ, ಮಾಗಡಿ ಮುಖ್ಯರಸ್ತೆಯ ಮೇಲೆ ಆಗಿರುತ್ತದೆ. ಅಪಘಾತದ ರಸ್ತೆ ತುಂಬಾ ವಾಹನ ದಟ್ಟಣೆ ಇರುವ ರಸ್ತೆ ಎಂದರೆ ಸರಿ. ನಾನು ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದೆನು. ರಸ್ತೆಯ ಮಧ್ಯೆದಲ್ಲಿ ರಸ್ತೆ ವಿಭಜಕ ಇದೆ ಎಂದರೆ ಸರಿ. ಅಪಘಾತದ ಪಡಿಸಿದ ಕಾರಿನ ಸಂಖ್ಯೆ-ಕೆಎ-36-ಜಿ-2619 ಆಗಿರುತ್ತದೆ. ಸದರಿ ಕಾರು ನನ್ನ ಎಡಗಡೆಯಿಂದ ಬಂದಿರುತ್ತದೆ. ಕಾರನ್ನು ನಾನು ಮುಂದಿನಿಂದ ನೋಡಿರುತ್ತೇನೆ. ಕಾರು ಉತ್ತರದಿಂದ ದಕ್ಷಿಣಾಭಿ ಮುಖವಾಗಿ ಹೋಗುತ್ತಿತ್ತು. ಕಾರು ಸರಿಯಾದ ದಿಕ್ಕಿನಲ್ಲಿ ಬರುತ್ತಿದ್ದರೂ ಸಹಾ ನಾನೇ ವಿರುದ್ಧ ದಿಕ್ಕಿನಲ್ಲಿ ಹೋಗಿ ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಕಾರು ಸರಿಯಾದ ದಿಕ್ಕಿನಲ್ಲಿ ಚಲಿಸುತ್ತಿತ್ತು ಎಂದರೆ ಸರಿಯಲ್ಲ. ಕಾರು ಎಷ್ಟು ವೇಗದಲ್ಲಿ ಬರುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ದ್ವಿಚಕ್ರ ವಾಹನವನ್ನು 30-40 ಕಿ ಮಿ ವೇಗದಲ್ಲಿ ಚಲಾಯಿಸುತ್ತಿದ್ದೆನು. ಅಪಘಾತದ ಸಮಯದಲ್ಲಿ ಕಛೇರಿಗೆ ಹೋಗುವ ಭರದಲ್ಲಿ ನಾನೇ ನಿರ್ಲಕ್ಷತನದಿಂದ ದ್ವಿಚಕ್ರ ವಾಹನ ಚಲಾಯಿಸಿ ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ನಿ.ಪಿ.5 ರಲ್ಲಿ ರಸ್ತೆ ಅಪಘಾತ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆನ್ರಿಜ್ ಉದ್ಯಮದಲ್ಲಿ ಮಿಶಿನ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೆನು. ಈಗ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ನಿ.ಪಿ.4 ರ ಪ್ರಕಾರ ನನ್ನ ವಾಹನದ ಮುಂಭಾಗ ಜಖಂಗೊಂಡಿದೆ

ಎಂದರೆ ಸರಿ. ನಾನು ಕೆಲಸ ಮಾಡುತ್ತಿದ್ದೆ ಮತ್ತು ಸಂಬಳದ ಪಡೆಯುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ನನ್ನ ಬಲ ತೊಡೆಗೆ ಗಾಯವಾಗಿರುತ್ತದೆ ಮತ್ತು ಶಸ್ತ್ರಚಿಕಿತ್ಸೆ ಆಗಿರುತ್ತದೆ. ನಾನು ಕೆಲಸ ಮಾಡುತ್ತಿದ್ದೆ ಮತ್ತು ಸಂಬಳದ ಪಡೆಯುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಬಲತೊಡೆಯಲ್ಲಿ ಒಳಜೋಡಣೆಯನ್ನು ತೆಗೆಯಲಾಗಿದೆ. ನಾನು ಈಗ ಮೊದಲಿನಂತೆ ಆರೋಗ್ಯವಾಗಿದ್ದೇನೆ ಮತ್ತು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1ನೇ ಎದುರುದಾರರು ಏಕಪಕ್ಷೀಯ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**